**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-521/2024 **PW**-1

**ದಿಃ 08.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಆರ್ ಸಿ ಬಿ ವಕೀಲರಿಂದಃ**

ಈ ಕೇಸನ್ನು ನೀವು ಯಾರ ವಿರುದ್ದ ಯಾವ ಕಾರಣಕ್ಕೆ ಹಾಕಿದ್ದೀರಿ ಎಂದರೆ ಸಾಕ್ಷಿ ಪೇಮೆಂಟ ಸಲುವಾಗಿ ನನ್ನ ಅತ್ತೆ ವಿರುದ್ದ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ನಾನು ಹತ್ತನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಇಂಗ್ಲೀಷ ಹಾಗೂ ಕನ್ನಡ ಓದಲು ಬರುತ್ತದೆಯಾ ಎಂದರೆ ಸಾಕ್ಷಿ ಕನ್ನಡ ಓದಲು ಬರುತ್ತದೆ ಎನ್ನುತ್ತಾರೆ. ಪ್ರಮಾಣ ಪತ್ರ ಬರೆಯಲು ಮಾಹಿತಿ ಯಾರು ಕೊಟ್ಟರೇಂದರೆ ಸಾಕ್ಷಿ ನಾನೇ ಕೊಟ್ಟಿರುತ್ತೇನೆ ಎನ್ನುತ್ತಾರೆ. ದಾವಾದಲ್ಲಿ ತೋರಿಸಿರುವ ಆಸ್ತಿಗಳು ಯಾರ ಹೆಸರಿನಲ್ಲಿವೆ ಎಂಬುದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನನ್ನ ಅತ್ತೆ ಹೆಸರಿನಲ್ಲಿ ಎನ್ನುತ್ತಾರೆ. ದಾವಾ ಆಸ್ತಿ ಸಂಖ್ಯೆ 1 ಯಾರ ಹೆಸರಿನಲ್ಲಿದೆ ಎಂಬುದರ ಬಗ್ಗೆ ಯಾವದಾದರೂ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ದಾಖಲೆ ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ ದಾವಾ ಆಸ್ತಿ ಸಂಖ್ಯೆ 1 ಇಮಾಮಸಾಬ ಅಲಿಸಾಬ ಮಡಕಿ ರವರ ಹೆಸರಿನಲ್ಲಿದೆ ಹೊರತು ಪ್ರತಿವಾದಿ ಹೆಸರಿನಲ್ಲಿಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ದಾವಾ ಸಂಖ್ಯೆ 1 ನನ್ನ ಅತ್ತೆಯ ಹೆಸರಿನಲ್ಲಿಲ್ಲ ಎಂದರೆ ಸಾಕ್ಷಿ ಇತ್ತು ಎನ್ನುತ್ತಾರೆ. ಶೆಡ್ಯೂಲ 2 ರಲ್ಲಿ ತೋರಿಸಿರುವ ಸರ್ವಿಸ ಬಿನೆಪಿಟ್ಸ ಹಣ ರೂ.17,78,640/- ಹಣ ನನ್ನ ಗಂಡ ಜೀವಿತಾವದಿಯಲ್ಲಿ ಆತನ ಖಾತೆಗೆ ಜಮಾ ಆಗಿತ್ತು ಎಂದರೆ ಸರಿ. ನನ್ನ ಗಂಡ ಜೀವಂತ ಇದ್ದಾಗ ಕ್ರಮ ಸಂಖ್ಯೆ 3 ರಿಂದ 5 ರಲ್ಲಿ ತೋರಿಸಿದ ಎಲ್ ಐ ಸಿ ಪಾಲಿಸಿಗಳನ್ನು ನನ್ನ ಗಂಡ ಜೀವಂತ ಇದ್ದಾಗಲೆ ಮಾಡಿಸಿದ್ದು ಅದಕ್ಕೂ ನನ್ನ ಅತ್ತೆಗೂ ಯಾವದೇ ರೀತಿಯ ಸಂಬಂದ ಇಲ್ಲ ಎಂದರೆ ಸದರಿ ಹಣವನ್ನು ತೆಗೆದು ನನ್ನ ಅತ್ತೆ ಕಡೆಗೆ ಕೊಟ್ಟಿದ್ದರು ಎನ್ನುತ್ತಾರೆ. ಅದೇ ರೀತಿ ಕ್ರಮ ಸಂಖ್ಯೆ 6 ಮತ್ತು 7 ರಲ್ಲಿರುವ ಜಮಾ ಹಣವನ್ನು ಪ್ರತಿವಾದಿ ವಾದಿ 2 ಮತ್ತು 3 ರವರ ಹೆಸರಿನಲ್ಲಿ ಮಾಡಿದ್ದು ಪ್ರತಿವಾದಿ ಕೇವಲ ನಾಮಿನಿಯಾಗಿರುತ್ತಾರೆಂದರೆ ಹೌದು. ಅದೇ ರೀತಿ ಕ್ರಮ ಸಂಖ್ಯೆ 8 ರ ಆಸ್ತಿ ಯಾರ ಹೆಸರಿನಲ್ಲಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಹಾಕಿದ್ದೇನೆ ಎನ್ನುತ್ತಾರೆ. ಕ್ರಮ ಸಂಖ್ಯೆ 8 ರ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂದಿಸಿದ್ದಲ್ಲ ಆ ಕಾರಣಕ್ಕೆ ನಾನು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಎಲ್ ಐ ಸಿ ಪಾಲಿಸಿ ಹಾಗೂ ಎಫ್ ಡಿ

ಹಣವನ್ನು ತೆಗೆದು ಪ್ರತಿವಾದಿ ಕಡೆ ಕೊಟ್ಟಿರುತ್ತೇವೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**